

ಅನುಷಾ ಜೈನ್

ಮಾಡಿ ಸಂಪೂರ್ಣ ರಾಮಾಯಣವನ್ನು ನೃತ್ಯದ ಮೂಲಕ ಪ್ರದರ್ಶನ ನೀಡಲಾಯಿತು. ಸ್ವಾತಿ ತಿರುನಾಳ ಮಹಾರಾಜರ 'ಭಾವಯಾಮಿ ರಘುರಾಮ' ಕೃತಿ (ತಾಳ ರೂಪಕ), ರಾಗಮಾಲಿಕೆ ಹೊಂದಿದ ಹಾಡಿಗೆ ಜತಿಗಳನ್ನು ಅಳವಡಿಸಿ ನೃತ್ಯ ಮಾಡಿದರು. ಆಫ್ರಿಕಾದ ಹಲವು ಜನರಿಗೆ ಭರತನಾಟ್ಯ ಎಂಬ ಕಲೆಯ ಪರಿಚಯವೇ ಇರದಿದ್ದರೂ ಅವರಿಗೆ ಅದು ಆನಂದ, ನೆಮ್ಮದಿ ನೀಡಿದ್ದು ತುಂಬಾ ಖುಷಿ ಎನಿಸಿತು. ಈ ತಂಡಕ್ಕೆ ಕಡಿಮೆ ಅವಧಿಯಲ್ಲಿ ತಯಾರಿ ನಡೆಸಬೇಕಾದ ಒತ್ತಡ ಇದ್ದರೂ ದೀಪಕ್ ಮತ್ತು ಪ್ರೀತಿ ಕಲಾ ದಂಪತಿ ಸಮರ್ಥವಾಗಿ ನಿಭಾಯಿಸಿದರು.



ಸೌಜನ್ಯ



ಗಿರೀಶ್ ಕುಮಾರ್

ವಿದೇಶದಲ್ಲಿ ನೃತ್ಯ ಕಾರ್ಯಕ್ರಮ ಮಾಡಬೇಕಾದರೆ ಅದು ಸುಲಭದ ಮಾತಲ್ಲ. ಅದಕ್ಕೆ ಸಾಕಷ್ಟು ತಯಾರಿ ಬೇಕು. ಸಂಸ್ಥೆ ವಿಸ್ತಾರವಾಗಿ ಹರಡಿರಬೇಕು. ಹಿಂದೆ ಸಾಕಷ್ಟು ನೃತ್ಯ ಕಾರ್ಯಕ್ರಮ ನೀಡಿರಬೇಕು. ಅದು ಯಶಸ್ಸನ್ನು ಕಂಡಿರಬೇಕು. ಜನ ಇಷ್ಟಪಟ್ಟಿರಬೇಕು. ಅದರ ತುಣುಕುಗಳನ್ನು ಭಾರತ ಸರ್ಕಾರದ ಸಾಂಸ್ಕೃತಿಕ ಸಚಿವಾಲಯ ಸಂಸ್ಥೆಗೆ ಕಳುಹಿಸಿ ತೀರ್ಪುಗಾರರಿಂದ ಆಯ್ಕೆಯಾಗಬೇಕು. ವಿದ್ವಾನ್ ದೀಪಕ್ ಅವರ ಭರತನಾಟ್ಯ ತಂಡ ಕರಾವಳಿಯಿಂದ ಆಯ್ಕೆಯಾದ ಪ್ರಥಮ ತಂಡ ಆಗಿತ್ತು.

### ಸಮರ್ಪಣಾ ಮನೋಭಾವ

ಮೂಕಾಂಬಿಕಾ ಕಲ್ಚರಲ್ ಸಂಸ್ಥೆಯ ರೂವಾರಿ ವಿದ್ವಾನ್ ದೀಪಕ್ ಕುಮಾರ್ ಎಳೆ ವಯಸ್ಸಿನಿಂದಲೇ ತಮ್ಮನ್ನು ತಾವು ಭರತನಾಟ್ಯ ಲೋಕಕ್ಕೆ ಸಮರ್ಪಿಸಿಕೊಂಡವರು. ತಂದೆ ಭವಾನಿ ಶಂಕರ್ ಹಾಗೂ ತಾಯಿ ಶಶಿಪ್ರಭಾ ಬೆನ್ನೆಲುಬು ಆಗಿ ನಿಂತಿದ್ದರೆ ಪತ್ನಿ ವಿದುಷಿ ಪ್ರೀತಿ ಕಲಾ ಇವರಿಗೆ ನೈತಿಕ ಬೆಂಬಲ ನೀಡುತ್ತಾ ಬಂದರು. ಜೊತೆಗೆ ಸಹೋದರ ಗಿರೀಶ್ ಕುಮಾರ್ ಅವರ ಸಹಕಾರ ಇತ್ತು. ಒಂದು ಕಾರ್ಯಕ್ರಮ ಸಾಂಗವಾಗಿ ನಡೆಯಬೇಕಾದರೆ ಒಂದು ತಂಡ, ಕೌಟುಂಬಿಕ ಬೆಂಬಲ ಬೇಕು. ಇವೆಲ್ಲವೂ ದೀಪಕ್ ಅವರಿಗೆ ಸಿದ್ಧಿಸಿದ ಕಾರಣ ಅವರ ಕಾರ್ಯಕ್ರಮ ಎಲ್ಲೇ ಹೋದರೂ ಯಶ ಕಾಣುತ್ತಿದೆ.

ದೀಪಕ್ ಕುಮಾರ್ ಭರತನಾಟ್ಯ ಜೂನಿಯರ್ ವಿಭಾಗದಲ್ಲಿ 3ನೇ ರ್‍ಯಾಂಕ್ ಪಡೆದವರು. ವಿದ್ವತ್ ನಾಟ್ಯಯೋಗ, ವಿಷಯಧಾರಿತ ನೃತ್ಯ ಸಂಯೋಜನೆಯಲ್ಲಿಯೂ ನಿಪುಣರು. ದೆಹಲಿ ದೂರದರ್ಶನದ 'ಎ' ಗ್ರೇಡ್ ಕಲಾವಿದ. 'ಪ್ರತಿಭಾ ದೀಪ', ಆರ್ಯಭಟ, ರಾಷ್ಟ್ರೀಯ ರತ್ನ' ಇವರಿಗೆ ಸಂದ ಪ್ರಶಸ್ತಿಗಳು. 600ಕ್ಕಿಂತಲೂ ಮಿಕ್ಕಿ ಕಾರ್ಯಕ್ರಮ ನೀಡಿದ್ದಾರೆ.

ವಿದುಷಿ ಪ್ರೀತಿ ಕಲಾ ಭರತನಾಟ್ಯ ಮತ್ತು ಶಾಸ್ತ್ರೀಯ ಸಂಗೀತದಲ್ಲಿ ವಿದ್ವತ್ ಪಡೆದವರು. ಆರ್ಯಭಟ, ಸದ್ಗುರು ಸಾಧನ ರತ್ನ' ಪ್ರಶಸ್ತಿ ಇವರ ಮುಡಿಗೇರಿದೆ. 'ಕಲಾದೀಪ' ಹೆಸರಿನಲ್ಲಿ ಯುಗಳ ನೃತ್ಯ ಪ್ರದರ್ಶನವನ್ನು ರಾಜ್ಯ ದೇಶ, ವಿದೇಶಗಳಲ್ಲಿ ನೀಡಿದ ಅಪರೂಪದ ಕಲಾವಿದೆ.

ವಿದ್ವಾನ್ ಗಿರೀಶ್ ಕುಮಾರ್ ಭರತನಾಟ್ಯದಲ್ಲಿ ವಿದ್ವತ್ ಪಡೆದ ಬೆಂಗಳೂರು ದೂರದರ್ಶನ 'ಬಿ' ಗ್ರೇಡ್ ಕಲಾವಿದ, ಆರ್ಯಭಟ ಪ್ರಶಸ್ತಿ ವಿಜೇತ. ಇವರು ನಾಡಿನಾದ್ಯಂತ ಅಲ್ಲದೆ ದೂರದ ಅಬುದಾಬಿಯಲ್ಲಿಯೂ ನೃತ್ಯ ಪ್ರದರ್ಶನ ನೀಡಿದ್ದಾರೆ.



ಸಿಂಧೂರ ಲಕ್ಷ್ಮಿ ಕನ್ನೆಪ್ಪಾಡಿ

ದೀಪಕ್ ಅವರ ಶಿಷ್ಯೆಯರಾದ ಅನುಷಾ ಜೈನ್ ಸಾಧನೆಯ ಹಾದಿಯಲ್ಲಿ ಮುನ್ನುಗ್ಗುತ್ತಿದ್ದಾಳೆ. ವಿದುಷಿ ಸೌಜನ್ಯ ಪ್ರಸ್ತುತ ಉಪನ್ಯಾಸಕಿ, ಭರತನಾಟ್ಯದಲ್ಲಿ ವಿದ್ವತ್ ಪಡೆದವರು. ಸಿಂಧೂರ ಲಕ್ಷ್ಮಿ ಕನ್ನೆಪ್ಪಾಡಿ ಭರತನಾಟ್ಯದಲ್ಲಿ ಛಾಪು ಮೂಡಿಸುತ್ತಿದ್ದಾರೆ. ಹೀಗೆ ಪ್ರತಿಭಾನ್ವಿತ ಕಲಾವಿದರನ್ನೊಳಗೊಂಡ ತಂಡ ನೃತ್ಯದಲ್ಲಿ ಸಾಧನೆಯ ಹಾದಿಯಲ್ಲಿದೆ. ■